- - ಓ ಎಸ್ ನಂ.135/2019

ಡಿ .ಡಬ್ಲ್ಯೂ :1

ದಿನಾಂಕ :26-03-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ವಾದಿಗಳು ನನ್ನ ಜಮೀನಿಗೆ ಸಂಬಂಧಿಸಿ ನನ್ನ ವಿರುದ್ದ ಈ ದಾವೆ ಸಲ್ಲಿಸಿದ್ದಾರೆ . ದಾವಾ ಸ್ವತ್ತು ಮೂಲತಃ ರಂಗಮ್ಮ ರವರಿಗೆ ಸೇರಿದ್ದು ಎಂದರೆ ಸಾಕ್ಷಿಯು ರಂಗಮ್ಮ ನಮ್ಮ ಮುತ್ತಜ್ಜಿ ಎಂದು ಉತ್ತರಿಸಿದ್ದಾರೆ . ಕಾಳೇಸಿದ್ದನಂಜಯ್ಯ ರವರ ತಾಯಿ ರಂಗಮ್ಮ ಎಂದರೆ ಸರಿಯಲ್ಲ . ರಂಗಮ್ಮ ರವರಿಗೆ ದಾವಾ ಸ್ವತ್ತು ಹೇಗೆ ಬಂತು ಎಂದರೆ ಅದು ಆಕೆಯ ಗಂಡನ ಸ್ವತ್ತು , ರಂಗಮ್ಮ ರವರ ಜೀವನಾಂಶಕ್ಕೆಂದು ಅವರ ಗಂಡ ಬಿಟ್ಟಿದ್ದರು ಎಂದು ತಿಳಿಸಿದ್ದಾರೆ . ದಾವಾ ಸ್ವತ್ತು ರಂಗಮ್ಮ ರವರ ಜೀವನಾಂಶಕ್ಕೆಂದು ಬಿಟ್ಟಿರುವ ಸ್ವತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ . ಅಂತಹ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುತ್ತಾತ ಸಿದ್ದ ನಂಜೇಗೌಡ ರವರು ಊರಿನ ಪಟೇಲರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ . ಅದೇ ಕಾರಣದಿಂದ ಅವರು ತಾಲ್ಲೂಕು ಕಚೇರಿಯಲ್ಲಿ ಖಾತೆಯನ್ನು ಬದಲಾಯಿಸುವ ಬರವಣಿಗೆ ಮಾಡುತ್ತಿದ್ದರು ಎಂದರೆ ಸರಿಯಲ್ಲ . ಹುಚ್ಚೇಗೌಡ ರವರು ನನ್ನ ಮುತ್ತಾತ ಸಿದ್ದ ನಂಜೇಗೌಡ ರವರ ಮಗ . ನನ್ನ ತಾತ ಹುಚ್ಚೇಗೌಡ ರವರು ಗ್ರಾಮದ ಜನರ ಬಳಿ ಸ್ವತ್ತಿನ ಕಂದಾಯ ಸಂಗ್ರಹಿಸುವ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರ ಮರಣ ನಂತರ ನನ್ನ ದೊಡ್ಡಪ್ಪ ಮಹಾಲಿಂಗೇಗೌಡ ರವರು ಊರಿನ ಪಟೇಲರಾಗಿದ್ದರು ಎಂದರೆ ಸರಿಯಲ್ಲ . ನನ್ನ ಮುತ್ತಾತ ಸಿದ್ದನಂಜೇಗೌಡ ರವರು , ಹುಚ್ಚೇಗೌಡ ರವರು ಹಾಗೂ ನನ್ನ ದೊಡ್ಡಪ್ಪ ಮಹಾಲಿಂಗೇಗೌಡ ರವರು ಊರಿನೆ ಪಟೇಲರಾಗಿ ಕೆಲಸ ಮಾಡುತ್ತಿದ್ದ ಕಾರಣ ಕಂದಾಯ ದಾಖಲಾತಿಗಳನ್ನು ಬದಲಾಯಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ . ನಿಡಿ -1 ರಲ್ಲಿ ರಂಗಮ್ಮ ಕೋಂ ಕಾಳಸಿದ್ದನಂಜಯ್ಯ ಎಂಬುದಾಗಿ ಇರಬೇಕಾಗಿದ್ದ ವಿವರಗಳನ್ನು ರಂಗಮ್ಮ ಕೋಂ ಸಿದ್ದನಂಜೇಗೌಡ ಎಂಬುದಾಗಿ ಬದಲಾಯಿಸಿದ್ದಾರೆ ಎಂದರೆ ಸರಿಯಲ್ಲ. ರಂಗಮ್ಮ ರವರಿಗೆ ಜೀವನಾಂಶದ ಮೂಲಕ ಸ್ವತ್ತು ಬಂದಿದೆ ಎಂಬುದಾಗಿ ತಿಳಿಸಿದ್ದೀರಿ ಆದರೆ ನಿಡಿ -1 ರಲ್ಲಿ ಅಂತಹ ವಿವರಗಳನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ . ನನ್ನ ಮುತ್ತಾತ ಸಿದ್ದನಂಜೇಗೌಡರವರು ಪಟೇಲರಾಗಿದ್ದ ಕಾರಣ ನಿಡಿ-1 ನ್ನು ಅಗತ್ಯಕ್ಕೆ ತಕ್ಕಂತೆ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸರ್ವೆ ನಂ. 18 ರಲ್ಲಿ ಒಟ್ಟು 4 ಎಕರೆ 37 ಗುಂಟೆ ಸ್ವತ್ತು ಇತ್ತು ಎಂದರೆ ನನಗೆ ಗೊತ್ತಿಲ್ಲ . ನಾನು 8 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ . ದಾವಾ ಸರ್ವೆ ನಂ. 18 ರಲ್ಲಿ ಒಟ್ಟು 4 ಎಕರೆ 37 ಗುಂಟೆ ಸ್ವತ್ತು ಮೂಲತಃ ಕಾಳಮ್ಮ ಕೋಂ ಕಾಳಸಿದ್ದನಂಜೇಗೌಡ ರವರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ . ಸದರಿ ಸ್ವತ್ತು ವಾದಿಗಳ ಕುಟುಂಬಕ್ಕೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಮೂಲತಃ ಕಾಳಮ್ಮ ಕೋಂ ಕಾಳಸಿದ್ದನಂಜೇಗೌಡ ಎಂಬುದಾಗಿ ಇದ್ದ ವಿವರಗಳನ್ನು ನನ್ನ ಮುತ್ತಾತ ಪಟೇಲರಾಗಿದ್ದ ಕಾರಣ ತಿದ್ದುಪಡಿ ಮಾಡಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಗಳಿಗೆ ಸೇರಿದ್ದು, ನನಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ . ದಾವಾ ಸ್ವತ್ತು ಮೂಲತಃ ನಮ್ಮ ಕುಟುಂಬಕ್ಕೆ ಸೇರಿದ್ದು ಎಂದು ತೋರಿಸಲು ಮತ್ತು ಚಕ್ಕುಬಂದಿಯನ್ನು ಸಾಬೀತುಪಡಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ . ದಾವಾ ಸ್ವತ್ತಿನಲ್ಲಿ ವಾದಿಗಳ ಕುಟುಂಬಸ್ಥರೇ ಹಲವು ವರ್ಷಗಳಿಂದಲೂ ಸ್ವಾಧೀನಪಡಿಸಿಕೊಂಡು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಕಾಳಮ್ಮ ಕೋಂ ಕಾಳಸಿದ್ದನಂಜೇಗೌಡ ರವರು ದಾವಾಸ ಸ್ವತ್ತಿಗೆ ಸಂಬಂಧಿಸಿ ಯಾರಿಗೂ ಯಾವುದೇ ನೋಂದಾಯಿತ ದಾಖಲೆ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಇಂದಿಗೂ ಸಹಾ ವಾದಿಗಳೇ ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಗಳ ಕುಟುಂಬಕ್ಕೆ ಮೂಲತಃ ಪಿತ್ರಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ . ದಾವಾ ಸ್ವತ್ತು ನಮಗೆ ಸೇರಿದ್ದು ಎಂದು ವಾದಿಗಳ ಹಕ್ಕು ಮಾಲಿಕತ್ವ , ಸ್ವಾಧೀನಕ್ಕೆ ತೊಂದರೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ದಾವಾ ಸರ್ವೆ ನಂಬರ್ ನಲ್ಲಿನ 4 ಎಕೆರ 37 ಗುಂಟೆ ಸ್ವತ್ತನ್ನು ನಂತರದಲ್ಲಿ 5 ಪೋಡುಗಳನ್ನಾಗಿ ಮಾಡಲಾಗಿದೆ ಎಂದರೆ ಯಾರು ಮಾಡಿದ್ದಾರೋ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ . ಸರ್ವೆ ನಂ. 18 ಕ್ಕೆ ಪೋಡಿಯಾದ ನಂತರ ಹೊಸ ಸರ್ವೆ ನಂ 18/1 ರಿಂದ 18/5 ಎಂಬುದಾಗಿ ಸಂಖ್ಯೆ ನೀಡಲಾಗಿದೆ ಎಂದರೆ ಸರಿ . ಸರ್ವೆ ನಂ 18/5 ಇಂದಿಗೂ ಸಹಾ ವಾದಿಗಳು ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದಿಗಳ ಕುಟುಂಬಕ್ಕೆಸೇರಿದ ಸ್ವತ್ತಿಗೆ ಸಂಬಂಧಿಸಿ ನನ್ನ ಮುತ್ತಾತ ಪಟೇಲರಾಗಿದ್ದ ಕಾರಣ ದಾಖಲೆಗಳನ್ನು ತಿದ್ದುಪಡಿ ಮಾಡಿ ವಾದಿಗಳ ಕುಟುಂಬಕ್ಕೆ ಮೋಸ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಗಳ ಹಿರಿಯರಿಗೆ ವಿದ್ಯಾಭ್ಯಾಸ ಇರದಿದ್ದ ಕಾರಣ ಅದನ್ನುದುರುಪಯೋಗ ಪಡಿಸಿಕೊಂಡು ನಮ್ಮ ಕುಟುಂಬದವರು ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳ ಸ್ವಾಧೀನಕ್ಕೆ

ತೊಂದರೆ ನೀಡಿ ಅವರ  ಮಾಲಿಕತ್ವವನ್ನು ಅಲ್ಲಗೆಳೆದಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ,  ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .